ಎಲ್ಲಿ ವಾಸ ಮಾಡುತ್ತಿದ್ದಾರೆಂಬುದೇ ನಮಗೆ ಗೊತ್ತಿರುವುದಿಲ್ಲ. ಇಂತಹ ಸಂದರ್ಭಗಳಲ್ಲಿ ನಾವು ಸ್ವಲ್ಪ ಕಟ್ಟುವಾದ ಕಾರ್ಯಕ್ರಮ ಕೈಕೊಂಡಿದ್ದರಿಂದ ಈ ಒಂದು ಸ್ಥಿತಿಗೆ ಬಂದಿದೆ. ಯಾರು ಪಹಣಿ ತಿದ್ದಿದ್ದಾರೆ ಎಂಬುದು ಗಮನಕ್ಕೆ ಬಂದಕೂಡಲೇ ಅವರನ್ನು ಸಸ್ಪೆಂಡ್ ಮಾಡುತ್ತಿದ್ದೇವೆ. ಹೀಗೆ ಪ್ರತಿವರ್ಷ 500 ರಿಂದ 600 ಜನರಿಗೆ ಶಿಕ್ಷೆ ಕೊಟ್ಟರೂ ಸಹ ಇದು ನಡೆಯುತ್ತಲೇ ಇದೆ. ಇದನ್ನು ಪೂರ್ಣವಾಗಿ ನಿಲ್ಲಿಸಲು ಕಠಿಣ ಶಿಕ್ಷೆ ವಿಧಿಸುವುದು ಇನ್ನೊಂದು ಮಾರ್ಗ. ಇಷ್ಟಗಳ ಜೊತೆಗೆ ಉಳಿದ ಮಾರ್ಗಗಳು ಏನಾದರು ಇದ್ದರೆ, ಆ ಬಗ್ಗೆ ಮಾನ್ಯ ಸದಸ್ಯರು ಸಲಹೆ ಮಾಡಿದರೆ ಅದನ್ನು ಕೂಡ ನಾವು ಪರಿಶೀಲನೆ ಮಾಡುವುದಕ್ಕೆ ಸಿದ್ಧರಾಗಿದ್ದೇವೆ.

ಶ್ರೀ ಕೆ. ಸಿದ್ದಯ್ಯ,—ಇಲ್ಲಿ ಹಣ ದುರುಪಯೋಗವಾಗುವುದಕ್ಕೆ ಕಾರಣ, ಇವರು ವಸೂಲಿ ಮಾಡಿದ ಹಣವನ್ನು ತಿಂಗಳ ಕೊನೆಯವರೆಗೂ ಇಟ್ಟುಕೊಳ್ಳುವುದರಿಂದ. ಇದನ್ನು ತಪ್ಪಿಸಲು ಹಣ ವಸೂಲು ಮಾಡಿದ ತಕ್ಷಣ ಇಲ್ಲವೇ 2-3 ದಿವಸಗಳಿಗೆ ಒಂದು ಸಲ ಹಣವನ್ನು ರೆಮಿಟ್ ಮಾಡ ಬೇಕೆಂದು ತಿಳಿಸಿದರೆ ಹಣ ದುರುಪಯೋಗವಾಗುವುದಕ್ಕೆ ಅವಕಾಶವೇ ಇರುವುದಿಲ್ಲ?

ಶ್ರೀ ಎನ್. ಹುಚ್ಚಮಾಸ್ತಿಗೌಡ,—ಆಗಾಗ್ಗೆ ಹಣ ಕಟ್ಟುವಂತೆ ಮಾಡಬೇಕಾದರೆ ಅದರ ಖರ್ಚನ್ನು ನಾವು ಕೊಡಬೇಕಾಗುತ್ತದೆ. ಆದಕಾರಣ ತಿಂಗಳ ಆಖ್ಯೆರಿನವರೆಗೆ ಹಣ ಇಟ್ಟುಕೊಂಡು ಕೊನೆಯಲ್ಲಿ ಕಟ್ಟಬೇಕೆಂದು ಈಗ ನಿಯಮವಿದೆ. ಆದರೂ ಸಹ ಮಾನ್ಯ ಸದಸ್ಯರು ಹೇಳಿದಂತಹ ಸಲಹೆಯನ್ನು ಜಾರಿಗೆ ತರುವುದು ಸಾಧ್ಯವೇ ಹೇಗೆ ಎಂಬುದನ್ನು ನಾನು ಪರಿಶೀಲನೆ ಮಾಡುತ್ತೇನೆ

ಶ್ರೀ ಟಿ ಎಂ. ಮಂಜುನಾಥ —ಗ್ರಾಮಾಧಿಕಾರಿಗಳು ತಪ್ಪು ಮಾಡುತ್ತಾರೆಂದು ಹೇಳಿದರು. ಇತ್ತೀಚೆಗೆ ಲ್ಯಾಂಡ್ ರಿಫಾರಮ್ಸ್‌ನಲ್ಲಿಯೂ ಪಹಣಿ ತಿದ್ದುವುದು ಜಾಸ್ತಿಯಾಗಿದೆ. ಇಂತಹ ಸಂದರ್ಭ ಗಳಲ್ಲಿ ಸರ್ಕಾರಕ್ಕೆ ಅರ್ಜಿಗಳೇನಾದರೂ ಬಂದರೆ, ತಪ್ಪು ಮಾಡಿದವರು ಯಾರೇ ಆಗಲಿ, ಅವರ ಮೇಲೆ ತಕ್ಷಣವೇ ಶಿಸ್ತಿನ ಕ್ರಮ ಕೈಕೊಳ್ಳಬೇಕೆಂದು ಕೂಡಲೇ ಆದೇಶ ಕೊಡುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಪಹಣಿಯನ್ನು ತಿದ್ದಲಾಗಿದೆ ಎಂಬುದು ಸರ್ಕಾರಕ್ಕೆ ತಿಳಿಯಬೇಕಾದರೆ ಯಾರಿಂದಲಾದರೂ ಅರ್ಜಿ ಬರಬೇಕು. ಆ ರೀತಿ ಅರ್ಜಿ ಬಂದರೆ ಆದರ ಬಗ್ಗೆ ನೂಕ್ತ ಕ್ರಮ ಕೈಕೊಳ್ಳುತ್ತೇವೆ. ಮತ್ತು ಪಹಣಿ ಸರಿಯಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಆಗಾಗ್ಗೆ ನೋಡಲಾಗುತ್ತದೆ ಜೊತೆಗೆ ಈಗಿನ ಪಹಣಿ ಪದ್ಧತಿಯನ್ನೇ ಬದಲಾವಣೆ ಮಾಡ ಬೇಕೆಂಬ ವಿಚಾರ ಸರ್ಕಾರದ ಮುಂದಿದೆ. ಅದನ್ನು ಆದಷ್ಟು ಬೇಗ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಅಬ್ದುಲ್ ಖುದ್ದೂಸ್ ಅನ್ಸರ್.—ನಮ್ಮ ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ 272 ಕೇಸ್‌ನಲ್ಲಿ ದಾಖಲೆಗಳನ್ನು ತಿದ್ದುಪಡಿ ಮಾಡಿದ್ದಾರೆ. ಇದರಿಂದ ಅಲ್ಲಿಯ ಕೆಲಸಕ್ಕೆ ತೊಂದರೆಯಾಗಿದೆ. ಇಂತಹ ಸಂದರ್ಭಗಳಲ್ಲಿ ಸರ್ಕಾರದವರು ಸಂಬಂಧಪಟ್ಟವರ ಮೇಲೆ ಏನು ಕ್ರಮ ಕೈಕೊಂಡಿದ್ದಾರೆ?

ಶ್ರೀ ಎನ್, ಹುಚ್ಚಮಾಸ್ತಿಗೌಡ,—ಗ್ರಾಮಲೆಕ್ಕಿಗರೇ ಪಹಣಿ ತಿದ್ದುತ್ತಾರೆಂಬ ಬಗ್ಗೆ ಸರ್ಕಾ ರಕ್ಕೆ ಅರ್ಜಿಗಳು ಬರುತ್ತವೆ. ಜೊತೆಗೆ ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಲ್ಯಾಂಡ್ ಟ್ರಿಬ್ಯುನಲ್ ನಲ್ಲಿಯೇ ಈ ರೀತಿ ಮಾಡುತ್ತಿದ್ದಾರೆಂದು ಸಹ ಸರ್ಕಾರಕ್ಕೆ ಅರ್ಜಿಗಳು ಬಂದಿವೆ. ಇಂತಹ ಸಂದರ್ಭ ಗಳಲ್ಲಿ ವಿಚಾರಣೆ ಮಾಡಿ ಸಂಬಂಧಪಟ್ಟವರ ಮೇಲೆ ನೂಕ್ತ ಕಾರ್ಯಕ್ರಮ ಕೈಕೊಳ್ಳುತ್ತೇವೆ.

Food Advisory Committees

267. Sri P. M. Bangi (Jamkhandi).—Will the Minister for Food and Forests be pleased to state.—

(*a*) whether it is not a fact that Food Advisory Committees were constituted in each taluk of the State consisting of Official and Non-official members two years ago;

(*b*) in how many taluk such Committees were constituted and the date of constit uting each committee;

(*c*) when the term of office of each of these Committees expired;

(*d*) the reasons for not re-constituting or continuing these Committees,

(*e*) whether the Government is aware that these Committees had effective check on the mal-distribution of foodgrains sugar and civil supplies among the consumers,

(*f*) if so, whether the Government intend to re-constitute these Committees, if so, when, if not. the reasons for the same?

SRI K. H. PATIL (Minister for Food and Forests).—

(*a*) No.

(*b*) to (*f*)—

In view of reply to clause (*a*) above, these do not arise.

ಶ್ರೀ ಪಿ. ಎಂ. ಭಾಂಗಿ.—ನನ್ನ ಮೊದಲನೆಯ ಪ್ರಶ್ನೆಗೆ ಉತ್ತರವಾಗಿ 'ನಿಜವಲ್ಲ' ಎಂದು ಹೇಳಿದ್ದೀರಿ. ಆದರೆ ಜಿಲ್ಲಾ ಮಟ್ಟದಲ್ಲಿ ಇಂತಹ ಸಲಹಾ ಸಮಿತಿಗಳಿರುವ ಬಗ್ಗೆ ತಮ್ಮ ಗಮನ ಹೋಗಿದೆಯೇ ಹೇಗೆ?

† ಶ್ರೀ ಕೆ. ಎಚ್. ಪಾಟೀಲ್.—ಗಮನ ಹೋಗಿದೆ.

ಶ್ರೀ ಪಿ. ಎಂ. ಭಾಂಗಿ.—ತಾಲ್ಲೂಕ್ ಮಟ್ಟದಲ್ಲಿ ಆಹಾರ ಸಮಿತಿಗಳು ಇಲ್ಲದಿರುವುದರಿಂದ ಖಾಸಗೀ ಸದಸ್ಯರಿಗೆ ತಮ್ಮ ಅಭಿಪ್ರಾಯಗಳನ್ನು ಈ ಬಗ್ಗೆ ವ್ಯಕ್ತ ಮಾಡುವುದಕ್ಕೆ ಸ್ಥಾನವಿಲ್ಲ. ಇದರಿಂದ ಸಕ್ಕರೆ ಸಲೀಸಾಗಿ ಬ್ಲಾಕ್ ಮಾರ್ಕೆಟ್‌ಗೆ ಹೋಗುತ್ತಿದೆ. ಈಗ ನ್ಯಾಯ ಬೆಲೆ ಅಂಗಡಿಗಳ ಮೂಲಕ ಬಡ ಮಂದಿಗೆ ಹಂಚುವ ಸಲುವಾಗಿ ಸಕ್ಕರೆಯ ಲೈಸನ್ಸ್‌ನ್ನು ಸಿಕ್ಕಿದವರಿಗೆರಾಲ್ಲಾಕೊಡುತ್ತಿದ್ದಾರೆ. ನನ್ನ ದೃಷ್ಟಿಯಲ್ಲಿ ಈ ರೀತಿ ಲೈಸನ್ಸ್ ಕೊಟ್ಟಮೇಲೆ ಅದನ್ನು ಎಫೆಕ್ಟೀವ್ ಆಗಿ ಚೆಕ್ ಮಾಡಲು ತಾಲ್ಲೂಕ್ ಮಟ್ಟದಲ್ಲಿ ಆಹಾರ ಸಲಹಾ ಸಮಿತಿಯನ್ನು ರಚಿಸಿದರೆ ಇದರಲ್ಲಾ ಸರಿ ಹೋಗುತ್ತದೆ. ಈ ಬಗ್ಗೆ ತಮ್ಮ ಅಭಿಪ್ರಾಯವೇನು?

ಶ್ರೀ ಕೆ. ಎಚ್. ಪಾಟೀಲ್.—ತಾಲ್ಲೂಕ್ ಮಟ್ಟದಲ್ಲಿ ಆಹಾರ ಸಲಹಾ ಸಮಿತಿಗಳಿವೆ. ತಾವು 2 ವರ್ಷಗಳ ಹಿಂದೆ ರಚಿಸಿದ್ದು ನಿಜವೇ ಎಂದು ಕೇಳಿದ್ದಕ್ಕೆ ನಿಜವಲ ಎಂದು ಉತ್ತರ ಕೊಡರಾಗಿದೆ. ಆದರೆ ಈ ಸಮಿತಿಗಳನ್ನು 1973ನೇ ಇಸವಿಯಲ್ಲಿಯೇ ರಚಿಸಲಾಗಿದೆ. ಈ ಸಮಿತಿಗಳ ಜೊತೆಗೆ ಜಿಲ್ಲಾ ಮಟ್ಟದಲ್ಲಿ, ಸ್ಟೇಟ್ ಲೆವಲ್‌ನಲ್ಲಿ ಮತ್ತು ಕಾರ್ಪೊರೇಷನ್ ಲೆವಲ್‌ನಲ್ಲಿ ಸಹ ಸಮಿತಿಗಳಿವೆ. ಈ ಸಮಿತಿಗಳೆರಾಲ್ಲಾ ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ ಎಂಬುದನ್ನು ನಾನು ಒಪ್ಪುತ್ತೇನೆ. ಈ ಮೊದಲು ಮಾನ್ಯ ಸದಸ್ಯರು ಹೇಳಿದಂತೆ ಎಲ್ಲಿಯಾದರು ಅಧಿಕಾರಿಗಳ ದುರ್ವರ್ತನೆಯಿಂದ ಸಾರ್ವಜನಿಕರಿಗೆ ತೊಂದರೆಯಾಗಿದ್ದರೆ, ಅದನ್ನು ನನ್ನ ಗಮನಕ್ಕೆ ತಂದರೆ ನಾನು ಕೂಡಲೇ ಆ ಬಗ್ಗೆ ಕ್ರಮ ಕೈಕೊಳ್ಳುತ್ತೇನೆ.

ಶ್ರೀ ಪಿ. ಎಂ. ಭಾಂಗಿ.—ಈ ಕಮಿಟಿಗಳ ಟೈಮು ಎಕ್ಸ್‌ಪೈರ್ ಆಗಿರುವುದರಿಂದ ಅವುಗಳನ್ನು ಪುನರ್‌ರಚಿಸುತ್ತೀರಾ ಹೇಗೆ?

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದಸ್ಯರ ಸಲಹೆ ಒಳ್ಳೆಯದಿದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ಕಮಿಟಿಗಳನ್ನು ಪುನರ್‌ರಚಿಸುವುದಾಗಿ ಹೇಳಿದಿರಿ ಆ ರೀತಿ ಮಾಡುವಾಗ ತಾಲ್ಲೂಕ್ ಮಟ್ಟದಲ್ಲಿ ಈಗಿರುವಂತೆಯೇ ತಮ್ಮ ಪಕ್ಷದ ಪ್ರತಿನಿಧಿಗಳನ್ನು ಮಾತ್ರ ನೇಮಕ ಮಾಡದೆ ಬೇರೆ ಪಕ್ಷದ ಪ್ರತಿನಿಧಿಗಳನ್ನು ಮತ್ತು ರೈತರ ಸಂಘದವರನ್ನು ಸಹ ಅದರಲ್ಲಿ ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಕೆ. ಎಚ್. ಪಾಟೀಲ್ —ಆಹಾರ ಸಮಿತಿಯೊಳಗೆ ಒಂದು ಪಕ್ಷದವರಿರುವುದು ಸರಿಯಲ್ಲ. ಎಲ್ಲ ಪಕ್ಷದವರೂ ಅದರಲ್ಲಿ ಒಳಗೊಳ್ಳುವಂತೆ ಮಾಡಲು ನಾವು ವಿಚಾರ ಮಾಡುತ್ತೇವೆ.

ಶ್ರೀ ಬಿ. ಬೈರಪ್ಪಾಜಿ.—ಸ್ವಾಮಿ, ಈ ಪ್ರಶ್ನೆಯ (ಅ)ಗೆ ಉತ್ತರವಾಗಿ ನಿಜವಲ್ಲ ಅಂಥ ಹೇಳಿದ್ದೀರಿ. ಹಿಂದೆ ಈ ಕಮಿಟಿಗಳು ತಾಲ್ಲೂಕಾ ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಇತ್ತು. ಅವು ಸರಿಯಾಗಿ ಫಂಕ್ಷನ್ ಮಾಡುತ್ತಾ ಇರಲಿಲ್ಲ. ಕಾರಣ ಅಲ್ಲ ಅಧಿಕಾರಿಗಳ ಕೈವಾಡ ಇದ್ದುದರಿಂದ ಆ ಲೋಪದೋಷಗಳನ್ನು ಸರಿಪಡಿಸುವುದಕ್ಕೆ ಅವಕಾಶವಾಗಲಿಲ್ಲ. ಆದುದರಿಂದ ಈಗಲಾದರೂ ಕೂಡ ತಾಲ್ಲೂಕಾ ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಈ ಕಮಿಟಿಗಳನ್ನು ಮತ್ತೆ ಪುನರ್ವ್ಯವಸ್ಥೆ ಕೂಡಲೇ ಮಾಡುತ್ತೀರಾ?

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದಸ್ಯರು 1975ನೇ ಇಸವಿಯಲ್ಲಿ ಈ ಪ್ರಶ್ನೆ ಕೇಳಿದ್ದಾರೆ ಅದಕ್ಕೊಸ್ಕರ ಅದು ನಿಜವಲ್ಲ ಅಂತ ಉತ್ತರಕೊಟ್ಟಿದೆ. ಇದು 1973 ರಲ್ಲೇ ಆಗಿದೆ.

ಶ್ರೀ ಕೆ. ಎಚ್. ಹನುಮೇಗೌಡ.—ಈ ಕಮಿಟಿ ರಚನೆ ಮಾಡಿದಮೇಲೆ ಇದು ಎಷ್ಟು ತಿಂಗಳಿಗೊಂದು ಸಾರಿ ಸೇರಬೇಕು ಅಂತ ಏನಾದರೂ ನಿರ್ಧಾರ ಮಾಡಿದ್ದೀರಾ?ಏತಕ್ಕೆಂದರೆ ಕಡೆಗೆ ಒಂದು ಸಾರಿಯೂ ಸೇರಿರಲಿಲ್ಲಾ ಅನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ಎಚ್ ಪಾಟೀಲ್ —ಕಮಿಟಿ ಸಭೆ ಸೇರಿರಲಿಲ್ಲ ಅನ್ನುವುದು ನನ್ನ ಗಮನಕ್ಕೆ ಬಂದಿದೆ. ಕೆಲವು ಕಡೆ ಎಂ ಎಲ್ ಎ.ಗಳನ್ನು ಮೀಟಿಂಗ್‌ಗೆ ಕೊರಂ ಇಲ್ಲ ಎಂದು ಸಭೆ ಸೇರಿರಲಿಲ್ಲ, ಮತ್ತು ಕೆಲವು ಮೀಟಿಂಗ್ ಕಡೆ ಕರದೇ ಇಲ್ಲ ಅನ್ನುವುದೂ ಕೂಡ ನನ್ನ ಗಮನಕ್ಕೆ ಬಂದಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಮುಂದೆ ಈ ಕಮಿಟಿಗಳನ್ನು ಮಾಡುವಾಗ ಸೂಕ್ತವಾದ ನಿಬಂಧನೆಗಳನ್ನು ಹಾಕುತ್ತೇವೆ

Medical Centre at Neralagudda

116. SRI T. TAREGOWDA (Kallambella).—Will the Minister for Health be pleased to state:—

(*a*) whether the Joint Director of Health has recommended to the Government to sanction a "Medical Centre" to Neralagudda, Bukkapatna Hobli, Sira Taluk as the villagers have constructed two type design building for the hospital and for Doctors' quarters at a cost of Rs. 40,000 and has also agreed to provide accommodation to the nurses and compounder in the village,

(*b*) if not, the steps taken to sanction one Medical Centre to this interior hilly area and to sanction posts of a doctor and other Health Staff to this centre at an early date?

SRI H. M. CHANNABASAPPA (Minister for Health).—

(*a*) No.

(*b*) This will be examined at the appropriate time.

ಶ್ರೀ ಟಿ ತಾರೇಗೌಡ.—ಸ್ವಾಮಿ, ಹಿಂದಿನ ಆರೋಗ್ಯ ಮಂತ್ರಿಗಳು ಆಸ್ಪತ್ರೆ ಕೊಡಬೇಕಾದರೆ ಗ್ರಾಮದವರು ಆಸ್ಪತ್ರೆಗೆ ಒಂದು ಕಟ್ಟಡವನ್ನು ಕೊಡಬೇಕು, ಡಾಕ್ಟರಿಗೆ ಒಂದು ಕಟ್ಟಡವನ್ನು ಕೊಡಬೇಕು. ಇವೆಲ್ಲವನ್ನೂ ಒದಗಿಸಿಕೊಟ್ಟರೆ ಒಂದು ಆಸ್ಪತ್ರೆಯನ್ನು ಕೊಡುತ್ತೇವೆ ಅನ್ನುವ ಭರವಸೆಯನ್ನು ಕೊಟ್ಟಿದ್ದರು ಈ ಪ್ರಶ್ನೆಯಲ್ಲಿ ಈ ವಿಷಯವನ್ನು ಸೂಕ್ಷ್ಮ. ಕಾಲದಲ್ಲಿ ಪರಿಶೀಲನೆ ಆಗುವುದು ಎಂದು ಹೇಳಿದ್ದೀರಿ ಅವರ ಭರವಸೆಯಂತೆ ಇಷ್ಟೆಲ್ಲಾ ಒದಗಿಸಿಕೊಟ್ಟಿದ್ದರೂ ಕೂಡ ಆಲ್ಲಿಗೆ ವೈದ್ಯಕೀಯ ಕೇಂದ್ರವನ್ನು ಮಂಜೂರು ಮಾಡುವುದಕ್ಕೆ ಇನ್ನು ಎಷ್ಟು ವರ್ಷಗಳು ಬೇಕು ಸ್ವಾಮಿ?